ಎಂದು ದೂರುತ್ತಾರೆ. ಡಿಟೆಕ್ಟಿವ್ ಸಂಸ್ಥೆಯ ಒಬ್ಬಾಕೆ ತನಿಖೆ ನಡೆಸಲು ಬರುತ್ತಾಳೆ. ಈ ಮಧ್ಯೆ ಓರ್ಲಾಂಡೋನ ಮಾಜಿ ಪತ್ನಿ, ಆತನ ಅಂತ್ಯಕ್ರಿಯೆಗೆ ಮರೀನಾ ಭಾಗವಹಿಸಬಾರದು ಎಂದು ಅಡ್ಡಿ ಪಡಿಸುತ್ತಾಳೆ. ಓರ್ಲಾಂಡೋ ಜತೆಗೆ ಮರೀನಾ ವಾಸಿಸುತ್ತಿದ್ದ ಫ್ಲ್ಯಾಟ್‌ನಿಂದ ಆಕೆಯನ್ನು ಹೊರದಬ್ಬುವುದಾಗಿ ಓರ್ಲಾಂಡೋ ಮೊದಲ ಪತ್ನಿಗೆ ಮಗ ಬೆದರಿಕೆ ಒಡ್ಡುತ್ತಾನೆ. ಎಲ್ಲರೂ ಸೇರಿ ಮರೀನಾಳ ಮೇಲೆ ಮುಗಿಬೀಳುತ್ತಾರೆ. 'ಆಕೆ ಲಿಂಗಾಂತರ ಹೊಂದಿದ ಗಂಡು. ಆಕೆಗೆ ಬದುಕುವ ಹಕ್ಕಿಲ್ಲ' ಎಂದು ವಾದಿಸುತ್ತಾರೆ. ಎಲ್ಲ ಸವಾಲುಗಳನ್ನು ಎದುರಿಸಿ ನಿಲ್ಲಲು ಮರೀನಾ ನಡೆಸುವ ಪ್ರಯತ್ನಗಳೇ ಈ ಸಿನಿಮಾ.

ಇಡೀ ಸಿನಿಮಾದ ಕೇಂದ್ರ ಬಿಂದು ಮರೀನಾ ಪಾತ್ರದಲ್ಲಿ ಹೊಸ ನಟಿ ಡೇನೀಲಾ ವೇಗಾ ನೀಡಿರುವ ಅದ್ಭುತ ನಟನೆ. ಅರ್ಜೆಂಟೈನಾ ಸಂಜಾತ, ಚಿಲಿಯಲ್ಲಿ ಹುಟ್ಟಿ ಬೆಳೆದ ನಿರ್ದೇಶಕ ಸೆಬಾಸ್ಟಿಯನ್ ಲೆಲಿಯೊ ಅತ್ಯುತ್ತಮ ಪಾತ್ರ ಪೋಷಣೆ ಮಾಡಿದ್ದಾರೆ. ಈತ ನಿರ್ದೇಶಿಸಿರುವ ಹಲವು ಚಿತ್ರಗಳು ಹಲವು ಅಂತರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿವೆ. ಸಂಭಾಷಣೆಯೇ ಇಲ್ಲದ ಚಿತ್ರಕಥೆಯ, ಮೊಂಟೇಜ್ ಮೂಲಕ ನಿರೂಪಿಸುವ ಈತನ ಕಿರುಚಿತ್ರಗಳ ಮೋಹದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಸ್ಪ್ಯಾನಿಶ್ ಭಾಷೆ ಚಿಲಿಯ ಈ ಚಿತ್ರ ಆಸ್ಕರ್‌ನ ವಿದೇಶ ವಿಭಾಗದಲ್ಲಿ ಪ್ರಬಲ ಸ್ಪರ್ಧಿ ಎನ್ನಲಾಗಿದೆ.

## ಆನ್ ಬಾಡಿ ಆ್ಯಂಡ್ ಸೋಲ್

30 ವರ್ಷಗಳ ಹಿಂದೆ ಚಿತ್ರರಂಗಕ್ಕೆ ಪ್ರವೇಶಿಸಿದಾಕೆ ಇಲ್ಡಿಕೊ ಎನೀಡಿ. 1989ರಲ್ಲಿ ಈಕೆ ನಿರ್ದೇಶಿಸಿದ ಚಿತ್ರ 'ಮೈ ಟ್ವೆಂಟಿಯಥ್ ಸೆಂಚುರಿ' ವೀಕ್ಷಕರು ಮತ್ತು ವಿಮರ್ಶಕರಿಂದ ಅತ್ಯುತ್ತಮ ಅಭಿಪ್ರಾಯ ಗಳಿಸಿತ್ತು. ಕೇನ್ಸ್ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯೂ ಲಭಿಸಿತ್ತು. ಆ ಬಳಿಕ 10 ವರ್ಷಗಳಲ್ಲಿ ಈಕೆ ಇನ್ನೂ ನಾಲ್ಕು ಚಿತ್ರಗಳನ್ನು ನಿರ್ದೇಶಿಸಿದರು. ಅದರಲ್ಲಿ ಒಂದೆರಡಕ್ಕೆ ಅಂತರರಾಷ್ಟ್ರೀಯ ಮಟ್ಟದ ಗೌರವಗಳೂ ಲಭಿಸಿದವು. ಆ ಬಳಿಕ 18 ವರ್ಷಗಳಿಂದ ಈಕೆ ಚಿತ್ರರಂಗದಿಂದ ನಾಪತ್ತೆಯಾಗಿದ್ದರು!

ಈಗ 62 ವರ್ಷ ವಯಸ್ಸಿನ ಇಲ್ಡಿಕೊ ಎನೀಡಿ, ತಮ್ಮ ಹೊಸ ಚಿತ್ರದೊಂದಿಗೆ 2018ರ ಆಸ್ಕರ್ ಪ್ರಶಸ್ತಿಯ ಮೆಟ್ಟಿಲು ಹತ್ತಿದ್ದಾರೆ. ಹಂಗೆರಿಯಿಂದ ಆಸ್ಕರ್ ಸ್ಪರ್ಧೆಗೆ ಆಯ್ಕೆಯಾಗಿರುವ 'ಆನ್ ಬಾಡಿ ಆ್ಯಂಡ್ ಸೋಲ್' ಹೆಸರೇ ಸೂಚಿಸುವಂತೆ ಮನುಷ್ಯನ ದೇಹ ಮತ್ತು ಆತ್ಮಗಳ ನಡುವಣ ಅಸಂಗತ ಭಾವುಕ ನಾಟಕ.

ಕಸಾಯಿಖಾನೆಯೊಂದರಲ್ಲಿ ಕೆಲಸ ಮಾಡುವ ಮ್ಯಾನೇಜರ್ ಎಂಡ್ರೆ ಅಲ್ಲೇ ಕೆಲಸ ಮಾಡುತ್ತಿದ್ದ ಸೂಪರ್‌ವೈಸರ್ ಜೆನೊ ಜತೆಗೆ ಸಾಂಗತ್ಯ ಬೆಳೆಸಿದ್ದ. ಆದರೆ ಅದು ಅಲ್ಪಕಾಲದ್ದು. ಕಸಾಯಿಖಾನೆಗೆ ಸ್ವಚ್ಛತಾ ಇನ್ಸ್‌ಪೆಕ್ಟರ್ ಆಗಿ ಕೆಲಸಕ್ಕೆ ಸೇರಿದ ಮರಿಯಾ ಆತನ ಗಮನ ಸೆಳೆಯುತ್ತಾಳೆ. ಇಬ್ಬರೂ ಪರಸ್ಪರ ಪ್ರೀತಿಸತೊಡಗುತ್ತಾರೆ. ಆದರೆ ನಿಜಜೀವನದಲ್ಲಿ ಅಲ್ಲ, ಕನಸಿನಲ್ಲಿ! ಅದೇಕೆಂದರೆ ಇಬ್ಬರಿಗೂ ಪ್ರತಿದಿನ ಬೀಳುವ ಕನಸು ಒಂದೇ! ಆ ಕನಸಿನಲ್ಲಿ ಇಬ್ಬರೂ ಜಿಂಕೆಗಳಾಗಿ ಕಾಡುಮೇಡುಗಳಲ್ಲಿ ಪರಸ್ಪರ ಪ್ರೀತಿಸುತ್ತಿದ್ದಾರೆ!



ಚಿತ್ರದ ಮೊದಲ ದೃಶ್ಯದಲ್ಲೇ ಪ್ರಾಣಿಗಳನ್ನು ಮಾಂಸವನ್ನಾಗಿ ಬಳಸುವ ಉದ್ಯಮದಲ್ಲಿ ತೊಡಗಿರುವ ಕೆಲಸಗಾರರ ನಿರ್ಭಾವುಕ ಕೆಲಸಗಳನ್ನು ತೋರಿಸುವ ನಿರ್ದೇಶಕಿ ದೇಹವೆಂದರೆ ಏನು ಎನ್ನುವ ಪ್ರಶ್ನೆಯನ್ನು ಮೂಡಿಸುತ್ತಾರೆ. ಕಸಾಯಿಖಾನೆಯ ಕ್ರೌರ್ಯ ಹೇಗೆ ಮನುಷ್ಯನ ಆಂತರ್ಯದಲ್ಲಿ ಬೆಳೆಯುತ್ತಾ ಹೋಗುತ್ತದೆ ಎನ್ನುವುದನ್ನು ಹೇಳುತ್ತಲೇ ಅಲ್ಲಿ ಹುಟ್ಟುವ ಪ್ರೇಮದ ನವಿರು ಭಾವನೆಗಳ ಮೂಲಕ ಬದುಕಿನ ಅಸಂಗತೆಯನ್ನೂ ನೆನಪಿಸುತ್ತದೆ ಚಿತ್ರ. ಎಂಡ್ರೆ ಮತ್ತು ಮರಿಯಾ ಇಬ್ಬರೂ ತಮ್ಮ ಕನಸುಗಳನ್ನು ಹಂಚಿಕೊಳ್ಳುತ್ತಾರೆ. ಆಶ್ಚರ್ಯವೆಂದರೆ ಅವರು ಒಂದೇ ಹಾಸಿಗೆಯಲ್ಲಿ ಮಲಗಿದರೂ ಅವರಿಗೆ ಬೀಳುವ ಏಕರೂಪದ ಕನಸು. ಈ ಮಧ್ಯೆ ಕಸಾಯಿಖಾನೆಯಲ್ಲಿ ಪ್ರಾಣಿಗಳಿಗಾಗಿ ಇರುವ ವಿಶೇಷ ವಯಾಗ್ರಾ ಪೌಡರ್ ಕಳ್ಳತನವಾಗುತ್ತದೆ. ಅದರ ತನಿಖೆ ನಡೆಸಲು ಲೇಡಿ ಇನ್ಸ್‌ಪೆಕ್ಟರ್ ಒಬ್ಬಾಕೆಯ ಪ್ರವೇಶವಾಗುತ್ತದೆ. ಆಕೆ ಪ್ರತಿಯೊಬ್ಬರನ್ನು ತನಿಖೆ ಮಾಡುತ್ತಾ ಅವರಿಗೆ ಬೀಳುವ ಕನಸುಗಳ ಬಗ್ಗೆ ವಿಚಾರಣೆ ಶುರು ಮಾಡುತ್ತಾಳೆ. ಚಿತ್ರಕಥೆಗೊಂದು ಹೊಸ ಸ್ವರೂಪ ಸಿಗುತ್ತದೆ.

18 ವರ್ಷಗಳಿಂದ ಸಿನಿಮಾ ನಿರ್ಮಾಣದಿಂದ ದೂರವಿದ್ದ ನಿರ್ದೇಶಕಿ ಇಲ್ಡಿಕೊ ಎನೀಡಿ, ಬುಡಾಪೆಸ್ಟ್ ಯೂನಿವರ್ಸಿಟಿಯಲ್ಲಿ ಮಕ್ಕಳಿಗೆ ಸಿನಿಮಾದ ಪಾಠ ಹೇಳಿಕೊಡುತ್ತಿದ್ದರು. ಆದರೆ ಪ್ರತಿವಾರದ ಕೊನೆಗೆ ಹೊಸ ಚಿತ್ರದ ಪೂರ್ವಭಾವಿ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಹಾಗೆಂದು ಅವರೇ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಅಂದರೆ ಈ ಚಿತ್ರದ ಕಥೆ, ಚಿತ್ರಕಥೆಗೆ 18 ವರ್ಷಗಳೇ ಹಿಡಿದಿವೆ.




FORM-IV

**SUDHA**

STATEMENT about ownership and other particulars about newspaper/periodical 'SUDHA' Bangalore as required to be published under Section 19-D (b) of the Press and Registration of Books Act, read with Rule-8 of the Registration of Newspapers (Central) Rules, 1956.

**1. Place of Publication:** Bangalore

**2. Periodicity of Publication:** Weekly

3. Printer : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023.

4. Publisher : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023

5. Editor : Mr. K. N. Tilak Kumar, Citizen of India, No. 173, Subbaramachetty Road, Basavanagudi, Bangalore-560 004.

6.Names and addresses of individuals who own the newspaper and partners or shareholders holding more than one percent of the total capital.

Proprietors: The Printers (Mysore) Pvt. Ltd. CIN. No. U22110KA1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.

**Shareholders holding more than one percent of the total capital:**

1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.

2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.

3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.

4. K. N. Guruswamy & Co. Pvt. Ltd. No. 75, M. G. Road, Bangalore-560 001 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S.N. Shiva Shankar, No. 10, VI Main, II Cross, Gandhinagar, Bangalore-560 009.7. Legal heirs of Late Shri. S.D.Shivaji, 27/G, 1st Main, 4th Cross, 60 ft Road, KEB Layout, Sanjayanagar, Bangalore-560 094 8. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 9. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswaranagar, Bangalore-560 079 10. Mr. M. P. Manjunath, No, 172, Ground Floor, Moksha Marga, Siddartha Layout, Mysore-570011. 11. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 12. Mr. M. Bhaktavatsala, Mrs. Prema B. Moola, Mr. Ananda Ranga Moola, Mr. Ved Manu Moola, & Ms. Dev Siri Moola, No. 9, 'Rangapuri', Lalbagh Road, Bangalore-560 027. 13. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 14. Mr. M. Ramesh, Mrs. Anuradha R. Moola, Ms. Sharuna R. Moola, Mr. Vivesh R. Moola, Ms. Bhavana R. Moola, 'Centropolis', No. 21, Langford Road, Richmond Town, Bangalore-560 025. 15. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi, hereby declare that the particulars given above are true to the best of my knowledge and belief.

Place: Bangalore<br>
Date: 28-02-2018

Sd/-<br>
(B.A. Ravi)<br>
Publisher